



ಕಾಲೇಜಿಗೆ ಬಂದ ಗುಮ್ಮನನ್ನು ಬೀಳ್ಕೊಡುತ್ತಿರುವ ಲೇಖಕರು




ನಾಣ್ಯದ ಮೇಲೆ ಗೂಬೆ

ನೋಡಬಾರ್ದು, ನೀವ್ ಹೊರೀಕ್ಕೋಗಿ, ನಾನೀ ಪಾಳುಗುಮ್ಮನ್ ಇಲ್ಲಿಂದ ಹೊರಗ್ ಹಾಕಿದ ಮೇಲೆ ಕರೀತೀನಿ' ಎಂದ.

ದಿಟ್ಟಿಸಿ ನೋಡಿದಾಗ ಗೊತ್ತಾಯಿತು – ರೂಮ್ ಸೇರಿಕೊಂಡು ಗೊಂದಲ ಎಬ್ಬಿಸಿದ್ದ ಹಕ್ಕಿ, ಹಳ್ಳಿಗರು 'ಪಾಳುಗುಮ್ಮ' ಎಂದು ಕರೆಯುವ ಸುಂದರ ಮುಖದ ಗೂಬೆ. ಸುಮಾರು ಒಂದು ಅಡಿಯಷ್ಟು ಎತ್ತರವಿದ್ದ ವಯಸ್ಕ ಗೂಬೆಯೊಂದು ಲಿಂಗಪ್ಪಣ್ಣನ ಟವೆಲ್ ಏಟಿನಿಂದ ತಪ್ಪಿಸಿಕೊಳ್ಳಲು ರೂಮಿನ ತುಂಬಾ ಹಾರಾಡುತ್ತಿತ್ತು. ತೆರೆದಿರುವ ಬಾಗಿಲಿನ ಮುಂದೆಲ್ಲಾ ಹುಡುಗರು ಅಡ್ಡ ಇದ್ದುದರಿಂದ ಆ ದಾರಿಯಿಂದ ಹೊರ ಹೋಗಲಾರದೆ, ಮುಚ್ಚಿದ ಕಿಟಕಿಯ ಕಂಬಿಯ ಮೇಲೆ ಕುಳಿತು ಗಾಬರಿಗಣ್ಣಿನಲ್ಲಿ ಸುತ್ತ ನೋಡುತ್ತಿತ್ತು. ಶನಿವಾರದಂದು ರಿಪೇರಿ ಮಾಡಲು ತೆರೆದಿದ್ದ ಬಾತ್‌ರೂಮ್ ಮೇಲಿನ ಸಣ್ಣ ಕಿಟಕಿಯ ಮೂಲಕ ಒಳಗೆ ಬಂದಿದ್ದ ಗೂಬೆ ಅಲ್ಲಿಯೇ ಇದ್ದದ್ದು ಕಾರ್ಪೆಂಟರ್‌ಗೆ ಗೊತ್ತಾಗಿಲ್ಲ. ಭಾನುವಾರ ರಿಪೇರಿ ಮುಗಿಸಿ ಹೊರಗಿನಿಂದ ಕಿಟಕಿ ಮುಚ್ಚಿದ್ದರಿಂದಲೋ ಏನೋ ಹೊರಗೆ ಹೋಗಲಾರದೆ ಇಡೀ ದಿನ–ರಾತ್ರಿ ಕ್ಯಾಬಿನ್‌ನಲ್ಲೇ ಸಮಯ ಕಳೆದಿದೆ ಎನಿಸಿತು.

ಲಿಂಗಪ್ಪಣ್ಣನಿಗೆ ಟವೆಲ್ ಬೀಸುವುದನ್ನು ನಿಲ್ಲಿಸಲು ಹೇಳಿ, 'ಸ್ವಲ್ಪ ಸಮಾಧಾನವಾಗಿರು. ಅದರಿಂದ ನಮಗೆ ಯಾವ ಅಪಾಯವೂ ಇಲ್ಲ. ಸ್ವಲ್ಪ ಹೊತ್ತಲ್ಲಿ ಅದೇ ಹೊರಗೆ ಹೋಗುತ್ತೆ. ನೀವೆಲ್ಲಾ ಬಾಗಿಲಿನಿಂದ ದೂರಸರಿದು ನಿಲ್ಲಿ' ಎಂದು ವಿದ್ಯಾರ್ಥಿಗಳಿಗೆ ಹೇಳಿದೆ. 'ಸಾರ್ ನಾವೂ ಒಳಗೆ ಬರ್ತೀವಿ, ಗುಮ್ಮ ನೋಡ್ತೀವಿ' ಎಂದು ವಿದ್ಯಾರ್ಥಿಗಳು ಗೋಗರೆಯಲು ಪ್ರಾರಂಭಿಸಿದರು. 'ಆಯ್ತು ಒಬ್ಬೊಬ್ಬರಾಗಿ ಒಳ ಬನ್ನಿ' ಎಂದೆ. ಹಕ್ಕಿ ಕಂಡ ಒಬ್ಬೊಬ್ಬರೂ ಅದರ ಕಣ್ಣು, ಗಾತ್ರ, ಕೊಕ್ಕು ಮತ್ತು ಬಣ್ಣಗಳ ಕುರಿತು ಪ್ರಶಂಸೆ ಮಾಡತೊಡಗಿದರು. ಫಸ್ಟ್ ಪಿಯುಸಿ ವಿದ್ಯಾರ್ಥಿನಿ 'ನೋಡೋಕ್ ಎಷ್ಟು ಮುದ್ದಾಗಿದೆ, ಕೊಟ್ರೆ ಮನೇಲಿ ಸಾಕ್ಕೊಂಡ್ ಬಿಡ್ತೀನಿ' ಎಂದಳು. ಅದಕ್ಕೆ ಕ್ಲಾಸ್‌ಮೇಟ್ ರಂಗನಾಥ 'ಹಂಗೆಲ್ಲಾದ್ರೂ ಮಾಡಿಬಿಟ್ಟೀಯ, ಮೊದ್ಲೇ ಅಪಶಕುನ ಅಂತಾರೆ, ಮನೇಗ್ ತಗಂಡೋದ್ರೆ ಮಕುಕ್ ಉಗುದ್ ಓಡುಸ್ತಾರೆ' ಅಂದ. ಕೀಟಲೆ ಸ್ವಭಾವದ ಅರವಿಂದ 'ಗೂಬೆ ಕತ್ತು ಮುನ್ನೂರರವತ್ತು ಡಿಗ್ರಿ ತಿರುಗ್ತದಂತೆ, ಇದೂ ತಿರುಗುಸ್ತದಾ ಚೆಕ್ ಮಾಡಿ ಸರ್' ಎಂದ. 'ಅದ್ರ ಮುಖದಲ್ಲೇ ಲವ್ ಸಿಂಬಲ್ ಐತೆ, ಯಾರಿಗಾದ್ರೂ ಕೊಡ್ತೀಯೇನೋ ನೋಡು', ಎಂದು ಅರವಿಂದನ್ನು ಕಿಚಾಯಿಸಿದ ಗಿರೀಶನಿಗೆ 'ನಿಂಗೆ ಲವ್ ಬಿಟ್ರೆ ಬೇರೆ ವಿಚಾರನೇ ಇಲ್ವ' ಎಂದು ನಾಲ್ಕಾರು ಹುಡುಗಿಯರು ಅವನ ಮೇಲೆ ಮುಗಿಬಿದ್ದರು. ಅವರನ್ನೆಲ್ಲಾ ಸುಮ್ಮನಿರಿಸಿ, ಪಕ್ಷಿಯಾಗಿ ಪಾಳುಗುಮ್ಮ ಮನುಷ್ಯನಿಗೆ ಹೇಗೆಲ್ಲ ನೆರವಾಗುತ್ತದೆ ಎಂದು ವಿವರಿಸಿದೆ. ಸುಮಾರು ಒಂದು ಗಂಟೆಯ ನಂತರ ಅದನ್ನು ಹಿಡಿದು ಹೊರಗೆ ಹಾರಿ ಬಿಟ್ಟೆ.

ನಯನ ಮನೋಹರ ಬ್ಯಾರನ್ ಔಲ್ – ಟೈಟೋನಿಡೆ ಕುಟುಂಬಕ್ಕೆ ಸೇರಿದ ಪಾಳುಗುಮ್ಮದ ವೈಜ್ಞಾನಿಕ ಹೆಸರು ಟೈಟೋ ಅಲ್ಬಾ. ಭಾರತದಲ್ಲಿ